# ಸಚಿನ್
## ದಾಂಪತ್ಯಕ್ಕೆ ಬೆಳ್ಳಿಹಬ್ಬ

ಸಾಮಾನ್ಯವಾಗಿ ಸೆಲೆಬ್ರಿಟಿಗಳ ಸಂಸಾರದಲ್ಲಿ ಕಲಹ ಹೆಚ್ಚು. ಹಣ, ಖ್ಯಾತಿ ಎರಡೂ ಕಾಲಬುಡದಲ್ಲಿ ಬಂದುಬಿದ್ದಿರುವಾಗ ತಲೆಯನ್ನು ಕುತ್ತಿಗೆ ಮೇಲೆ ಇಟ್ಟು ಬದುಕುವುದು ಕಷ್ಟ ಎನ್ನುವುದು ನಿಜವೇ. ಆದರೆ ಭಾರತೀಯ ಕ್ರಿಕೆಟ್‌ನ ದಾಖಲೆಗಳ ವೀರ ಸಚಿನ್ ತೆಂಡೂಲ್ಕರ್ ಇದಕ್ಕೆ ಅಪವಾದ. ಮೇ ಕೊನೆಯ ವಾರದಲ್ಲಿ ಸಚಿನ್ ಮತ್ತು ಡಾ. ಅಂಜಲಿ ಅವರ ಮದುವೆಗೆ 25 ವರ್ಷ ತುಂಬಿತು. 25 ವರ್ಷಗಳ ಈ ದಾಂಪತ್ಯ ಯಾವ ಅಪಸ್ವರವೂ ಇಲ್ಲದೆ ನಿಸೂರಾಗಿ ಸಂಭ್ರಮದಿಂದ ನಡೆದುಕೊಂಡು ಬಂದಿರುವುದು ಮೆಚ್ಚುಗೆಯ ಸಂಗತಿ.

ಭಾರತೀಯ ಕ್ರಿಕೆಟ್‌ನಲ್ಲಿ ಅತ್ಯುನ್ನತ ಸಾಧನೆಗಳನ್ನು ಮಾಡಿ ನಿವೃತ್ತರಾಗಿರುವ ಸಚಿನ್ ತೆಂಡೂಲ್ಕರ್ ಒಂದು ರೀತಿಯಲ್ಲಿ ಅಜಾತಶತ್ರು. ಅವರ ಜೀವನದಲ್ಲಿ ವಿವಾದಗಳು ಇಲ್ಲವೆಂಬಷ್ಟು ಕಡಿಮೆ. ಹಿಂದೊಮ್ಮೆ ವಿದೇಶದಿಂದ ಫೆರಾರಿ ಲಕ್ಷುರಿ ಕಾರನ್ನು ಆಮದು ಮಾಡಿಕೊಂಡಾಗ ಆಮದುಸುಂಕ ವಿನಾಯ್ತಿಗೆ ಮನವಿ ಮಾಡಿದ ಒಂದು ವಿವಾದ ಬಿಟ್ಟರೆ ಬೇರೆ ಯಾವುದೂ ನೆನಪಾಗುವುದಿಲ್ಲ. ದಾಂಪತ್ಯದ ವಿಷಯದಲ್ಲಂತೂ ಸಚಿನ್ ಅಪ್ಪಟ ಚಿನ್ನವೇ.

ಸಚಿನ್ ಮತ್ತು ಅಂಜಲಿ ಅವರದ್ದು ಪ್ರೇಮವಿವಾಹ. ಮೊದಲ ಬಾರಿ ಅಂತರರಾಷ್ಟ್ರೀಯ ಕ್ರಿಕೆಟ್ ಸರಣಿಯಲ್ಲಿ ಭಾಗವಹಿಸಿ ಮುಂಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಸಚಿನ್ ಕಣ್ಣಿಗೆ ಡಾಕ್ಟರ್ ಅಂಜಲಿ ಕಾಣಿಸಿದ್ದು ಯೋಗಾಯೋಗ. ಅಂಜಲಿ ತಮ್ಮ ತಾಯಿಯನ್ನು ಸ್ವಾಗತಿಸಿ ಕರೆದೊಯ್ಯಲು ಅಲ್ಲಿಗೆ ಬಂದಿದ್ದರು. ಅದು ಮೊದಲ ನೋಟದ ಪ್ರೇಮ. ವಿಶೇಷವೆಂದರೆ ಅಂಜಲಿಯವರಿಗೆ ಸಚಿನ್ ಯಾರೆಂದು ಗೊತ್ತಿರಲಿಲ್ಲ, ಕ್ರಿಕೆಟ್ ಆಟದ ಬಗ್ಗೆ ಏನೇನೂ ಗೊತ್ತಿರಲಿಲ್ಲ. ಇಬ್ಬರೂ ಪರಸ್ಪರ ಆಕರ್ಷಿತರಾದರು. ಪರಿಚಯ ಮಾಡಿಕೊಂಡರು. ಅದಾಗಿ ತಿಂಗಳ ಬಳಿಕ ಗೆಳೆಯರೊಬ್ಬರ ಮನೆಯಲ್ಲಿ ಸೇರಿ, ಪರಸ್ಪರ ವಿವರಗಳನ್ನು ಹಂಚಿಕೊಂಡರು. ಅಲ್ಲಿಂದ ಶುರುವಾದ ಪ್ರೇಮ, ಐದು ವರ್ಷಗಳ ಕಾಲ ಮುಂದುವರಿಯಿತು. ಆದರೆ ಜೋಡಿಗೆ ಹೊರಗೆ ತಿರುಗಾಡುವುದು ಕಷ್ಟವಿತ್ತು. ಏಕೆಂದರೆ ಸಚಿನ್‌ಗೆ ಅಭಿಮಾನಿಗಳ ಕಾಟ. ಒಮ್ಮೆ ಗೆಳೆಯರ ಜೊತೆಗೆ ಮಣಿರತ್ನಂ ನಿರ್ದೇಶನದ 'ರೋಜಾ' ಚಿತ್ರ ನೋಡಲು ಥಿಯೇಟರಿಗೆ ಹೋಗಿದ್ದರಂತೆ. ಯಾರಿಗೂ ಗುರುತು ಹತ್ತಬಾರದೆಂದು ಸಚಿನ್ ಪುಟ್ಟ ನಕಲಿ ಗಡ್ಡ ಅಂಟಿಸಿ ಕನ್ನಡಕ ಏರಿಸಿದ್ದರು. ಇಂಟರ್‌ವಲ್ ಹೊತ್ತಿಗೆ ಕನ್ನಡಕ ಕೆಳಗೆ ಬಿದ್ದಾಗ ಒಬ್ಬನಿಗೆ ಸಚಿನ್ ಗುರುತು ಹತ್ತಿದ್ದೇ ಜನ ಮುತ್ತಿಕೊಂಡರು. ಸಿನಿಮಾ ಅರ್ಧಕ್ಕೆ ಬಿಟ್ಟು ಇಬ್ಬರೂ ಹೊರಗೆ ಬಂದರಂತೆ.

ಕ್ರಿಕೆಟ್‌ನಲ್ಲಿ ಎತ್ತರೆತ್ತರಕ್ಕೆ ಏರುತ್ತಿದ್ದ ಸಚಿನ್ ಸದಾ ಪ್ರಯಾಣದಲ್ಲಿ ಇರುತ್ತಿದ್ದರು. ಅಂಜಲಿ ವಿದೇಶಗಳಲ್ಲಿ ಇರುತ್ತಿದ್ದ ಪ್ರಿಯತಮನಿಗೆ ಉದ್ದುದ್ದ ಪತ್ರ ಬರೆಯುತ್ತಿದ್ದರು. ಆಗ ಅಂತರರಾಷ್ಟ್ರೀಯ ಕರೆಗಳು ಬಹಳ ದುಬಾರಿ ಆಗಿದ್ದವು. ಹಣ ಉಳಿಸಲು ಬೇರೆ ದಾರಿ ಇರಲಿಲ್ಲ ಎನ್ನುವುದು ಅಂಜಲಿಯವರೇ ಸಮಾರಂಭವೊಂದರಲ್ಲಿ ಹೇಳಿದ ಗುಟ್ಟು.

ಮದುವೆಯ ಕುರಿತು ಚರ್ಚಿಸಿ, ನಿಶ್ಚಿತಾರ್ಥವೊಂದನ್ನು ಮಾಡಿಕೊಳ್ಳೋಣ ಎಂದು ಇಬ್ಬರೂ ನಿರ್ಧರಿಸಿದಾಗ ಸಚಿನ್ ದೂರದ ಆಫ್ರಿಕಾದಲ್ಲಿದ್ದರು. ಸಚಿನ್ ಸಲಹೆಯಂತೆ ಅಂಜಲಿ ಮನೆಯಲ್ಲಿ ಬ್ರೇಕಿಂಗ್ ನ್ಯೂಸ್ ಮಾಡಿದರು. 1995ರಲ್ಲಿ ಮದುವೆ ನಡೆಯಿತು. ಮದುಮಗಳು ವರನಿಗಿಂತ ಆರು ವರ್ಷ ದೊಡ್ಡವಳು.

1997ರಲ್ಲಿ ಜನಿಸಿದ ಸಾರಾ, 99ರಲ್ಲಿ ಜನಿಸಿದ ಅರ್ಜುನ್ ಇಬ್ಬರು ಮುದ್ದು ಮಕ್ಕಳ ಸಂಸಾರ. ಸಚಿನ್ ಕ್ರಿಕೆಟ್ ಜಗತ್ತಿನ ದೇವರೇ ಎಂಬಂತೆ ಬೆಳೆದುನಿಂತ ಕಥೆಯನ್ನು 2017ರಲ್ಲಿ ಬಿಡುಗಡೆಯಾದ ಸಚಿನ್: ಎ ಬಿಲಿಯನ್ ಡ್ರೀಮ್ಸ್ ಎನ್ನುವ ಚಿತ್ರ ತೆರೆದಿಟ್ಟಿದೆ.



ಪ್ಲೇಯಿಂಗ್ ಇಟ್ ಮೈ ವೇ ಎನ್ನುವ ಆತ್ಮಕಥೆಯಲ್ಲಿ ಸಚಿನ್, ಅಂಜಲಿ ಜೊತೆಗಿನ ಪ್ರೇಮದ ಹಲವು ಘಟನೆಗಳನ್ನು ಬಣ್ಣಿಸಿದ್ದಾರೆ. ಪುಸ್ತಕ ಬಿಡುಗಡೆಯ ದಿನ ಮಾತನಾಡಿದ ಅಂಜಲಿ, ಇನ್ನಷ್ಟು ರಹಸ್ಯಗಳನ್ನು ಬಿಚ್ಚಿಟ್ಟಿದ್ದರು.

ಸಚಿನ್ ಪ್ರಕಾರ, 'ಅಂಜಲಿ ನನ್ನ ಶಕ್ತಿ. ಭಾರತೀಯ ತಂಡದ ನಾಯಕನಾಗಿ ಸೋಲಿನ ಸರಪಳಿ ಎದುರಾದಾಗಲೂ ನನಗೆ ಆತ್ಮಶಕ್ತಿ ತುಂಬಿದವಳು.' ಅಂಜಲಿ ಪ್ರಕಾರ, 'ನಾನು ಸಚಿನ್‌ಗೆ ಐದು ವರ್ಷ ಗರ್ಲ್‌ಫ್ರೆಂಡ್ ಆಗಿದ್ದೆ, ಮದುವೆಯಾದ ಬಳಿಕವೂ ನಾನು ಹಾಗೆಯೇ ಇದ್ದೇನೆ. ವ್ಯತ್ಯಾಸವೇನೂ ಆಗಿಲ್ಲ!' ಮದುವೆಯಾಗಿ ಕ್ರಿಕೆಟ್‌ನಿಂದ ನಿವೃತ್ತಿ ಆಗುವವರೆಗೂ ಒಂದು ದೀಪಾವಳಿ ಹಬ್ಬಕ್ಕೂ ಸಚಿನ್ ಮನೆಯಲ್ಲಿ ಇರಲಿಲ್ಲವಂತೆ. ಅವರದ್ದು ಸದಾ ಕ್ರಿಕೆಟ್ ಪ್ರವಾಸ. 'ಆದರೆ, ಅವರು ಮನೆಯಲ್ಲಿ ಇದ್ದ ದಿನಗಳೆಲ್ಲವೂ ನನಗೆ ದೀಪಾವಳಿಯೇ' ಎಂದಿದ್ದಾರೆ ಅಂಜಲಿ. ಬಹುಶಃ ಈ ಅನುಭಾವವೇ ಅವರ ದಾಂಪತ್ಯದ ಸುಖೀಸೂತ್ರ ಇರಬೇಕು.

ಸುಖೀದಾಂಪತ್ಯದ 25ನೇ ವರ್ಷಾಚರಣೆಯ ದಿನ ಸಚಿನ್ ಹೆಂಡತಿಗೆ ಒಂದು ಸರ್ಪ್ರೈಸ್ ಕೊಟ್ಟಿದ್ದಾರೆ. ಅಡುಗೆ ಮನೆಗೆ ಹೋಗಿ, ತಾನೇ ಖುದ್ದಾಗಿ ಮ್ಯಾಂಗೊ ಕುಲ್ಫಿ ತಯಾರಿಸಿ ಮಡದಿ, ಮಕ್ಕಳಿಗೆ ತಿನ್ನಿಸಿದ್ದಾರೆ! ಸಾಮಾಜಿಕ ಜಾಲತಾಣದಲ್ಲಿ ಸಚಿನ್ ಮ್ಯಾಂಗೊ ಕುಲ್ಫಿ ತಯಾರಿಸುವ ವಿಡಿಯೊ ನೋಡಿ, ಅಭಿಮಾನಿಯೊಬ್ಬಳು ಉದ್ಗರಿಸಿದ್ದು 'ಕುಲ್ಫಿ ಮಾಡುವವನನ್ನು ನೋಡಬೇಕೋ, ಅಥವಾ ಮಾಡುವುದನ್ನು ನೋಡಬೇಕೋ.. ಗೊತ್ತಾಗುತ್ತಿಲ್ಲ. ಇವನೆಂಥ ಸುಂದರಾಂಗ..!'

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65